ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.)
ಅಧೀಕ್ಷಕ ಅಭಿಯಂತರರು(ವಿ)
ಕಾರ್ಯ ಮತ್ತು ಪಾಲನಾ ವೃತ್ತ, ಹುವಿಸಕಂನಿ,
ಸೆಕ್ಟರ್ ನಂ-06, ನವನಗರ, ಬಾಗಲಕೋಟೆ-03
Tel:08354-297330

HUBLI ELECTRICITY SUPPLY COMPANY LIMITED
(Wholly owned Govt. of Karnataka undertaking)
Superintending Engineer (Ele.)
O&M Circle, HESCOM, Sector No-06,
Navanagar, Bagalkot-03
E-mail ID: seebgkt.hescom@gmail.com
dcabgkt.hescom@gmail.com

Corporate Identity Number(CIN): U31401KA2002SGC030437

ಪ್ರಕರಣ ಸಂಖ್ಯೆ:05/2022

ಶ್ರೀ. ಎಮ್ ಎಸ್ ಹಿರೇಮಠ
ಪ್ರತಿನಿಧಿ: } -------- ದೂರುದಾರರು.

ವಿರುದ್ಧ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ),
ಕಾರ್ಯ ಮತ್ತು ಪಾಲನಾ ಉಪ-ವಿಭಾಗ
ಹುವಿಸಕಂನಿ., ಬದಾಮಿ } -------- ಪ್ರತಿವಾದಿ

ವಿಷಯ: "ಗ್ರಾಹಬಳಕೆ ವಿದ್ಯುತ್ ಸೌಲಭ್ಯ ಒದಗಿಸುವ" ಕುರಿತು.

*&*&*

ಪ್ರಕರಣ ಸಂಖ್ಯೆ:05/2022 ರಕ್ಕೆ ಸಂಬಂಧಿಸಿದಂತೆ, ದಿನಾಂಕ:20-10-2022 ರಂದು ಬೆಳಿಗ್ಗೆ 11.30 ಘಂಟೆಗೆ ಶ್ರೀ ಕಾಶಿನಾಥ. ಹಿರೇಮಠ, ಅಧೀಕ್ಷಕ ಅಭಿಯಂತರರು(ವಿ), ಬಾಗಲಕೋಟೆ ಹಾಗೂ ಅಧ್ಯಕ್ಷರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ವೃತ್ತ ಕಛೇರಿ, ಹೆಸ್ಕಾಂ ಬಾಗಲಕೋಟೆ ರವರು ಸಭೆಗೆ ಹಾಜರಿದ್ದ ಎಲ್ಲ ಸದಸ್ಯರು/ಅಧಿಕಾರಿಗಳು/ಗ್ರಾಹಕರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

ಹಾಜರಿದ್ದವರು:1) ಶ್ರೀ. ಸಿ ವ್ಹಿ ಶಿವಪೂಜಿ, ಸದಸ್ಯರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ಬಾಗಲಕೋಟೆ.

2) ಶ್ರೀ. ನಾರಾಯಣ ಕಳ್ಳಿಮನಿ, ಕಾರ್ಯನಿರ್ವಾಹಕ ಇಂಜನೀಯರ(ವಿ) ಕಾ ಮತ್ತು ಪಾ ವಿಭಾಗ ಹೆಸ್ಕಾಂ, ಬಾಗಲಕೋಟೆ.

3) ಶ್ರೀ. ಎ ಆರ್ ನದಾಫ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಉಪವಿಭಾಗ ಹೆಸ್ಕಾಂ, ಬದಾಮಿ.

4) ಶ್ರೀ. ಮಲ್ಲಿಕಾರ್ಜುನ ಶಂಕ್ರಯ್ಯ ಹಿರೇಮಠ ಜಯನಗರ 3ನೇ ಕ್ರಾಸ್ ಎಪಿಎಮ್.ಸಿ ಹಿಂದುಗಡೆ ತಾ॥ಬದಾಮಿ ಜಿ॥ಬಾಗಲಕೋಟೆ.

ಪೀಠಿಕೆ :

1. ಸಹಾಯಕ- ಕಾರ್ಯನಿರ್ವಾಹಕ ಅಭಿಯಂತರರು(ವಿ) ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ ಬದಾಮಿ ಸದರೀ ಲೇಔಟ್‌ಗೆ ಅಭಿವೃದ್ಧಿ ಶುಲ್ಕ ಪಾವತಿಸಿರುವದಿಲ್ಲ ಎಂದು ತಿಳಿಸಿದರು.

2. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ ಬದಾಮಿ ಇವರು ಸದರೀ ಲೇಔಟ್ ಗೆ ಸಂಬಂಧಿಸಿದ ದಾಖಲೆಗಳು ವೇದಿಕೆಯಲ್ಲಿ ಮಂಡಿಸದ ಕಾರಣ ಹಾಗೂ ಸದರೀ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ ಬದಾಮಿ ರವರಿಗೆ ಸದರೀ ಲೇಔಟಿಗೆ ಈ ಕಚೇರಿಯಿಂದ ಮಂಜೂರಾತಿ ಪಡೆದ ದಾಖಲೆ, ಹಾಗೂ ಸದರೀ ಲೇಔಟಿನ ದಾಖಲೆಗಳೊಂದಿಗೆ ಸ್ಥಾವರದ ವಿವರವಾದ ಮಾಹಿತಿಯನ್ನು 28-09-2022 ರ ಸಭೆಯಲ್ಲಿ ವೇದಿಕೆಗೆ ಸಲ್ಲಿಸಲು ಸೂಚಿಸಿ ಸಭೆಯನ್ನು ಮುಂದೂಡಲಾಯಿತು.

ಶ್ರೀ. ಮಲ್ಲಿಕಾರ್ಜುನ ಶಂಕ್ರಯ್ಯ ಹಿರೇಮಠ ಜಯನಗರ 3ನೇ ಕ್ರಾಸ್ ಎಪಿಎಮ್‌ಸಿ ಹಿಂದುಗಡೆ ಸಾ||ಬದಾಮಿ ಜಿ||ಬಾಗಲಕೋಟೆ ರವರ ದಿನಾಂಕ:20-10-2022 ರ ಸಭೆಯಲ್ಲಿನ ಹೇಳಿಕೆ :

ಗ್ರಾಹಕರು ನನ್ನ ಮನೆಯ ಅಕ್ಕ-ಪಕ್ಕದಲ್ಲಿಯ ಮನೆಗಳಿಗೆ ಶಾಶ್ವತ ವಿದ್ಯುತ್ ಸಂಪರ್ಕ ಇರುತ್ತದೆ. ಆದರೆ ನನ್ನ ಮನೆಗೆ ತಾತ್ಕಾಲಿಕ ವಿದ್ಯುತ್ ಸಂಪರ್ಕ ನೀಡಿರುವದು ನನ್ನ ಮನೆಗೆ ಶಾಶ್ವತ ವಿದ್ಯುತ್ ಸಂಪರ್ಕ ನೀಡಲು ಹಾಗೂ ಅದಕ್ಕೆ ಪಾವತಿ ಮಾಡಬೇಕಾದ ಹಣವನ್ನು ಪಾವತಿಸಲು ಒಪ್ಪಿಗೆ ಸೂಚಿಸಿ ಶಾಶ್ವತ ವಿದ್ಯುತ್ ಸಂಪರ್ಕ ಕೊಡಲು ವಿನಂತಿಸಿದರು.

ಶ್ರೀ. ಎ ಆರ್ ನದಾಫ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಉಪವಿಭಾಗ ಹೆಸ್ಕಾಂ, ಬದಾಮಿ ರವರ ದಿನಾಂಕ:20-10-2022 ರ ಸಭೆಯಲ್ಲಿನ ಹೇಳಿಕೆ:

ಅರ್ಜಿದಾರರು ಬದಾಮಿ ಸರ್ವೇ ನಂ:127/ಹ ಶಿವಪುರ ರಸ್ತೆ, ಜಯನಗರ ರಲ್ಲಿ ಪ್ಲಾಟ್ ನಂ:20 ರಲ್ಲಿ ಸ್ವಂತ ಕಟ್ಟಡವನ್ನು ನಿರ್ಮಿಸಿರುತ್ತಾರೆ. ಅರ್ಜಿದಾರರು ತಮ್ಮ ಬಳಿ ಇರುವ ಬಡಾವಣೆಯ ನಕ್ಷೆಯ ನಕಲು ಪ್ರತಿಯನ್ನು ಉಪ-ವಿಭಾಗ ಬದಾಮಿ ಕಚೇರಿಗೆ ಸಲ್ಲಿಸಿದ್ದು, ನಕ್ಷೆಯಲ್ಲಿ ಒಟ್ಟು 24 ಪ್ಲಾಟುಗಳು ಇರುತ್ತವೆ. ಸದರೀ ಸರ್ವೇ ನಂ. 127/ಹ ರ ಸ್ಥಳ ಪರಿಶೀಲನೆ ಮಾಡಲಾಗಿ ಒಟ್ಟು 24 ಪ್ಲಾಟುಗಳಲ್ಲಿ 09 ಪ್ಲಾಟುಗಳಲ್ಲಿ ಕಟ್ಟಿರುವ ಮನೆಗಳಿಗೆ ಶಾಶ್ವತ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗಿದ್ದು, ವಿವರಗಳು ಈ ಕೆಳಗಿನಂತಿರುತ್ತದೆ.

| ಕ್ರ. ಸಂ | ಗ್ರಾಹಕರ ಹೆಸರು | ಪ್ಲಾಟ್ ನಂ | ಆರ್ ಆರ್ ಸಂಖ್ಯೆ | ಶಾಶ್ವತ ವಿದ್ಯುತ್ ಸಂಪರ್ಕ ನೀಡಿದ ದಿನಾಂಕ | ಪಾವತಿಸಿದ ಅಭಿವೃದ್ಧಿ ಶುಲ್ಕ |
|---|---|---|---|---|---|
| 1 | ಶಾರದಾಬಾಯಿ ಪ. ಮೇಲಿನಮನಿ | 5 | 12017 | 23.08.2002 | 5000 |
| 2 | ಎಸ್.ಪಿ. ಮೇಲಿನಮನಿ | 6 | 12241 | 04.02.2002 | 5000 |
| 3 | ಮಲ್ಲವ್ವ ಎಸ್. ಹೂವಿನಗಿಡದ | 18 | 39990 | 01.08.2009 | 4000 |
| 4 | ಬಸವ್ವ ಎಸ್. ಯಾದವಾಡ | 3 | 56168 | 13.08.2015 | 4000 |
| 5 | ಬಸವ್ವ ಎಸ್. ಯಾದವಾಡ | 4 | 56169 | 13.08.2015 | 4000 |
| 6 | ನಾಗಪ್ಪ ಸಿ. ಭಜಂತ್ರಿ | 19 | 56170 | 13.08.2015 | 4000 |
| 7 | ಸಂಗಪ್ಪ ಎಂ. ಬಾರಕೇರ | 21 | 56174 | 13.08.2015 | 4000 |
| 8 | ಭಾರತಿ ಆರ್. ಹೊಸಮನಿ | 22 | 56175 | 13.08.2015 | 4000 |
| 9 | ರೇಣವ್ವ ಪೂಜಾರ | 15 | 65384 | 07.06.2018 | |

ಪ್ಲಾಟ್ ನಂ:20 ರಲ್ಲಿ ಅರ್ಜಿದಾರರು ಮನೆಯನ್ನು ಕಟ್ಟಿಸಿದ್ದು, ಇನ್ನುಳಿದ ಪ್ಲಾಟುಗಳು ಖಾಲಿ ಇರುತ್ತದೆ. ಮೇಲಿನ ಕೋಷ್ಟಕದಲ್ಲಿ ತಿಳಿಸಿರುವ ಎಲ್ಲ ಆರ್.ಆರ್ ಸಂಖ್ಯೆಗಳು ಕಡತಗಳನ್ನು ಪರಿಶೀಲಿಸಿದಾಗ ಯಾವ ಕಡತಗಳಲ್ಲೂ ಸಹ ಬಡಾವಣೆಗೆ ಸಂಬಂಧಿಸಿದ ದಾಖಲೆಗಳು ಲಭ್ಯವಿರುವದಿಲ್ಲ. ಹಾಗೂ ಕಡತಗಳಲ್ಲಿನ ಶಾಖಾಧಿಕಾರಿಗಳ ವರದಿಗಳಲ್ಲಿ ಸದರೀ ಪ್ಲಾಟುಗಳು 127/1 ಆಗಿದ್ದು, ಸರ್ವೇ ನಂ:127/2 ರ ಒಳಗಡೆ ಬರುತ್ತದೆ ಎಂದು ದೃಢೀಕರಿಸಿರುತ್ತಾರೆ.

ಅಬಾಂಡನ್ಡ ಬಡಾವಣೆ ಎಂದು ಅಪ್ರೂವಲ್ ಆಗಿರುವ ಲೇಔಟ್ ರಜಿಸ್ಟರ್ ನಲ್ಲಿ ಈ ಕೆಳಗಿನ ದಾಖಲೆಗಳು ಲಭ್ಯವಾಗಿರುತ್ತವೆ.

| ಕ್ರ.ಸಂ | ಸರ್ವೇ ನಂ | ಹೆಸರು | ಮಂಜೂರಾಗಿರುವ ಪತ್ರ ಸಂಖ್ಯೆ ದಿನಾಂಕ | ಪ್ಲಾಟುಗಳ ಸಂಖ್ಯೆ |
|---|---|---|---|---|
| 1 | 127/2 | ಮೂಲಿಮನಿ ಬಡಾವಣೆ | BJP/SEE/EE(O)/TA-3/4839-41 18.08.2004 | 10 |
| 2 | 127/7 | ಜಯನಗರ ಬಡಾವಣೆ | BJP/SEE/EE(O)/TA-1/15011-13 02.01.2007 | 19 |

ಶಾಖಾಧಿಕಾರಿಗಳು ಅರ್ಜಿದಾರರಿಗೆ ಪತ್ರದ ಮೂಲಕ ಸದರೀ ಬಡಾವಣೆ ಸರ್ವೇ ನಂ:127/ಹ ಹೆಸ್ಕಾಂನಿಂದ ವಿದ್ಯುದ್ದೀಕರಣಕ್ಕಾಗಿ ಅನುಮೋದನೆಯಾಗಿರುವದಿಲ್ಲ. ಹಾಗೂ ಶಾಶ್ವತ ವಿದ್ಯುತ್ ಸಂಪರ್ಕ ಕಲ್ಪಿಸಬೇಕಾದರೆ ಬಡಾವಣೆಯ ಮಾಲೀಕರು ಸ್ವ ಕಾಮಗಾರಿ ಯೋಜನೆಯ ಅಡಿಯಲ್ಲಿ ನಿಯಮಾವಳಿಗಳ ಪ್ರಕಾರ ವಿದ್ಯುದ್ದೀಕರಣ ಮಾಡಿಕೊಳ್ಳಬೇಕಾಗಿರುತ್ತದೆ. ಒಂದು ವೇಳೆ ಬಡಾವಣೆಯ ಮಾಲೀಕರು ಅಬ್ಸಕ್ಯಾಂಡ ಆಗಿದ್ದರೆ ಅಥವಾ ಆರ್ಥಿಕ ಪರಿಸ್ಥಿತಿ ಹಾಳಾಗಿ ಇಂಟರೆಸ್ಟ್ ಇಲ್ಲದಿದ್ದರೆ, ಅದರ ಬಗ್ಗೆ ನಿಖರವಾದ ದಾಖಲೆಗಳನ್ನು ಸಲ್ಲಿಸಿದರೆ, ಸದರೀ ಬಡಾವಣೆಯನ್ನು

ಅಬಾಂಡನ್ಡ ಬಡಾವಣೆ ಎಂದು ಪರಿಗಣಿಸಿ ಶಾಶ್ವತ ವಿದ್ಯುತ್ ಸಂಪರ್ಕವನ್ನು ನೀಡಲು ಅವಕಾಶವಿದೆ ಎಂದು ತಿಳಿಸಿರುತ್ತಾರೆ.

ಸದರೀ ಸರ್ವೇ ನಂಬರಗೆ ಸಂಬಂಧಪಟ್ಟ ಎಲ್ಲಾ ಬಡಾವಣೆಗಳ ನಕ್ಷೆಗಳನ್ನು ಪರಿಶೀಲಿಸಲು ಭೂ ಮಾಪನಾ ಕಾರ್ಯಾಲಯ ಬದಾಮಿ ರವರಿಗೆ ಪತ್ರ ಬರೆದಿದ್ದು, ಇಲ್ಲಿಯವರೆಗೆ ಯಾವುದೇ ಪ್ರತಿಕ್ರಿಯೆ ದೊರೆತಿರುವದಿಲ್ಲ. ಸರ್ವೇ ನಂ:127/ಅ ರ ಒಟ್ಟು 24 ಪ್ಲಾಟುಗಳಲ್ಲಿ ಕಟ್ಟಿರುವ ಮನೆಗಳಿಗೆ ಶಾಶ್ವತ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಸದರಿ ವಾದಿ ಪ್ರತಿವಾದಿಗಳ ಹೇಳಿಕೆಗಳನ್ನು ಆಲಿಸಿ, ಮಾನ್ಯ ವೇದಿಕೆಯು ಈ ಕೆಳಗಿನಂತೆ ಆದೇಶ ನೀಡಲಾಗಿದೆ.

## ಆ ದೇ ಶ

ಕ್ರ.ಸಂ:ಬಿಜಿಕೆ/ಅಇಂ(ವಿ)/ಉಲೆನಿ/ಸಲೆ/ಹಿಸ-1/2022-23/ 7972-7976 ದಿನಾಂಕ: 29 OCT 2022

ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ(ವಿ) ಕಾ ಮತ್ತು ಪಾ ಉಪವಿಭಾಗ ಹೆಸ್ಕಾಂ, ಬದಾಮಿ ಹಾಗೂ ಶಾಖಾಧಿಕಾರಿ ಬದಾಮಿ ರವರು ಸದರೀ ಲೇಔಟಗೆ ಸಂಬಂಧಿಸಿದ ಅಂದಾಜು ಪತ್ರಿಕೆಗಳನ್ನು ಸಕ್ಷಮ ಅಧಿಕಾರಿಗಳಿಂದ ಮಂಜೂರಾತಿ ಪಡೆದು ಲೇಔಟನ ಅಂದಾಜು ಪತ್ರಿಕೆ ಪರಿಶೀಲಿಸಿ ಅಭಿವೃದ್ಧಿ ವೆಚ್ಚ ಭರಿಸಿಕೊಂಡು ಮಂಜೂರಾತಿ ನೀಡುವುದು. ನಂತರ ನಿಗಮದ ನಿಯಮಾನುಸಾರ ಸದರೀ ಗ್ರಾಹಕರಿಗೆ ಖಾಯಂ ವಿದ್ಯುತ್ ಸಂಪರ್ಕ ನೀಡಲು ಸೂಚಿಸಿ, ಸದರೀ ಪ್ರಕರಣವನ್ನು ಮುಕ್ತಾಯಗೊಳಿಸಿ ಆದೇಶಿಸಿದೆ.

ಶ್ರೀ ನಾರಾಯಣ ಕಳ್ಳಿಮನಿ
ಕಾರ್ಯನಿರ್ವಾಹಕ ಅಭಿಯಂತರರು(ವಿ),
ಹಾಗೂ ಗ್ರಾ.ಕುಂ.ಕೊ.ನಿ.,ವೇದಿಕೆಯ
ಸದಸ್ಯರು, ಬಾಗಲಕೋಟ.

ಶ್ರೀ [illegible] ಸದಸ್ಯರು,
ಗ್ರಾ.ಕುಂ.ಕೊ.ನಿ.ವೇ, ಬಾಗಲಕೋಟ.

ಅಧ್ಯಕ್ಷರು, 29/10
(ಕಾಶೀನಾಥ.ಜಿ ಹಿರೇಮಠ,)
ಅಧೀಕ್ಷಕ ಅಭಿಯಂತರರು(ವಿ) ಬಾಗಲಕೋಟ ಹಾಗೂ ಗ್ರಾಹಕರ
ಕುಂದು ಕೊರತೆ ನಿವಾರಣಾ ವೇದಿಕೆ
ಕಾ ಮತು. ಪಾ ವೃತ್ತ ಹುವಿಸಕಂನಿ.,ಬಾಗಲಕೋಟ

ಪ್ರತಿಯನ್ನು:

1) ಮುಖ್ಯ ಇಂಜಿನೀಯರ್(ವಿ) ಕಾ ಮತ್ತು ಪಾ ವಲಯ ಹುವಿಸಕಂನಿ., ಬೆಳಗಾವಿ. ರವರ ದಯಾಪರ ಮಾಹಿತಿಗಾಗಿ.
2) ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ.ಅ), ನಿಗಮ ಕಛೇರಿ, ಹುವಿಸಕಂನಿ., ಹುಬ್ಬಳ್ಳಿ ರವರ ದಯಾಪರ ಮಾಹಿತಿಗಾಗಿ.
3) ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ವಿಭಾಗ ಹೆಸ್ಕಾಂ, ಬಾಗಲಕೋಟೆ ರವರ ಮಾಹಿತಿಗಾಗಿ.
4) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ, ಬದಾಮಿ ರವರ ಮಾಹಿತಿಗಾಗಿ.
5) ಶ್ರೀ. ಮಲ್ಲಿಕಾರ್ಜುನ ಶಂಕ್ರಯ್ಯ ಹಿರೇಮಠ ಜಯನಗರ 3ನೇ ಕ್ರಾಸ್ ಎಪಿಎಮ್.ಸಿ ಹಿಂದುಗಡೆ ಸಾ॥ಬದಾಮಿ ಜಿ॥ಬಾಗಲಕೋಟೆ. ಮೋ.ಸಂ:9448917644
2) ಕಛೇರಿ ಪ್ರತಿ/ಪ್ರಧಾನ ಕಡತ.